'ಟ್ರಿನ್ ಟ್ರಿನ್!'

ಫೋನು ಹೊಡೆದುಕೊಳ್ಳಲಾರಂಭಿಸಿದಾಗ ಯಾರಾದರೂ ರಿಸೀವ್ ಮಾಡಬಹುದೆಂದು ಕೆಲಸದಲ್ಲಿ ನಿರತಳಾಗಿದ್ದೆ, ಅವಸರದಲ್ಲಿದ್ದಂತೇ ಅದು ಬಿಟ್ಟೂಬಿಡದೇ ಬೊಬ್ಬೆ ಹೊಡೆದಾಗ ಅರ್ಧಂಬರ್ಧ ಬೆಂದ ಚಪಾತಿಯ ಉರಿ ತಗ್ಗಿಸಿ ಧಾವಿಸಿದ್ದೆ, ಹಿಟ್ಟಿನ ಕೈಯಿಂದಲೇ ಫೋನ್ ಕಿವಿಗೆ ಹಿಡಿದಿದ್ದೆ.

'ಅಕ್ಕಾರ ತಲೀ ದವಾಖಾನಿ ಹೌದಲ್ರೀ? ನನ್ ಹೆಂಡ್ತಿ ಒಂದ್ ನಮೂನಿ ಬಡಬಡಿಸ್ಲಿಕ್ಹತ್ತ್ಯಾಳು. ಮತ್ತಂಗ ನಗೂದೂ ಅಳೂದೂ ಜೋರ್ ನಡದೇತಿ ಅಮಾಶೀ ಸನೀಕ ಬಂತ್ ನೋಡ್ರೀ, ಗುಳಗೀ ಖಾಲಿ ಆಗ್ಯಾವು ಒಂದೀಟ ಮೆಣಸಿನ್ಕಾಯಿ ಡಾಕ್ಟರ್ದು ಅಪಾಯಿಂಟ್ಮೆಂಟು ಕೊಡ್ರಲ್ಲ'

ಯಪ್ಪಾ! ಮತ್ತದೇ ರಾಂಗ್ ನಂಬರಿನ ಹಾವಳಿ. ವೈದ್ಯರ ಹೆಸರೂ ಜೊತೆಗೂಡಿ ಮೆಣಸಿನಪುಡಿ ಹಚ್ಚಿಕೊಂಡಷ್ಟು ಮೈ ಉರಿಯತೊಡಗಿತು 'ರಾಂಗ್ ನಂಬರ್!'. ಸಿಟ್ಟಿನಿಂದ ಫೋನ್ ಕುಕ್ಕಿ 'ಎಲ್ಲರೂ ಎಲ್ಲಿದ್ದೀರೋ!' ಎಂದು ಬೈಯುತ್ತಲೇ ಅಡುಗೆ ಮನೆಯೆಡೆ ಧಾವಿಸಿದಾಗ ಚಪಾತಿ ಒಣಗಿ ಕಟಕ್ ರೊಟ್ಟಿಯಂತಾಗಿತ್ತು!

ಮೆಂಟಲ್ ಆಸ್ಪತ್ರೆ ಹಾಗೂ ನಮ್ಮ ಮನೆಯ ಫೋನಿನ ನಂಬರಿನಲ್ಲಿ ಸಾಮ್ಯತೆಯಿತ್ತೇನೋ, ಇಂತಹ ರಾಂಗ್ ನಂಬರಿನ ಹಾವಳಿಯಂತೂ ಇದ್ದದ್ದೇ. ಕೆಲವರು ಅಪಾಯಿಂಟ್‌ಮೆಂಟ್ ಅಷ್ಟೇ ಕೇಳಿದರೆ, ಇನ್ನೂ ಕೆಲವರು ಗಾಬರಿಯಿಂದ ಸಮಸ್ಯೆಗಳನ್ನು ಹೇಳಿಕೊಳ್ಳಲು ಶುರುಮಾಡುತ್ತಿದ್ದರು. ಸಮಸ್ಯೆ ಅನುಭವಿಸಿದವರಿಗಷ್ಟೇ ಅದರ ಆಳದ ಅರಿವಿರುತ್ತದೆ. ಪಾಪ! ಅದೆಷ್ಟು ನೊಂದುಕೊಂಡಿದ್ದಾರೋ, ಅವಸರದಲ್ಲಿ ಸರಿಯಾದ ನಂಬರ್ ಡಯಲ್ ಮಾಡಲು ಆಗದಿರಬಹುದು ಎಂದುಕೊಂಡು ಸಮಾಧಾನದಿಂದಲೇ 'ರಾಂಗ್ ನಂಬರ್' ಎಂದು ಹೇಳಿ ಆಸ್ಪತ್ರೆಯ ಸರಿಯಾದ ನಂಬರನ್ನೂ ಕೊಡುತ್ತಿದ್ದೆನಾದರೂ ಆಗಾಗ ಸಹನೆ ಕಳೆದುಕೊಳ್ಳುವುದೂ ಇತ್ತು. ನಮ್ಮನೆಗೆ ಬರುತ್ತಿದ್ದದ್ದೇ ಒಂದೋ ಮಿಸ್ಡ್ ಕಾಲ್, ಬಿಟ್ಟರೆ ಈ ರಾಂಗ್ ನಂಬರ್‌ನ ಹಾವಳಿ. ರೋಸಿ ಹೋಗಿದ್ದೆನಾದರೂ ನಿರುಪಾಯ ಸ್ಥಿತಿ.

ನನ್ನ ಕಿರಿಯ ಅಣ್ಣ ಕೆಲಸದ ನಿಮಿತ್ತ ಹುಬ್ಬಳ್ಳಿಯ ನಮ್ಮ ಮನೆಗೆ ಬಂದಿದ್ದವ ಅಂಗಳದಲ್ಲಿ ವಿಹರಿಸುತ್ತಿದ್ದನೇನೋ, ನನ್ನ ಕೂಗಿಗೆ ಒಳಬಂದಿದ್ದ. ರಾಂಗ್ ನಂಬರಿನ ಹಾವಳಿ ಹೇಳಿಕೊಂಡು ಬೇಸರಿಸುತ್ತಾ ಅಡುಗೆ ಕೆಲಸದಲ್ಲಿ ಮತ್ತೆ ವ್ಯಸ್ತಳಾಗಿದ್ದೆ. ರಟ್ಟಿನಂತಾದ ಚಪಾತಿ ತುಂಡನ್ನು ಕಟುಂಗುಡಿಸುತ್ತಾ ಪಡಸಾಲೆಯ ಸುಖಾಸೀನದಲ್ಲಿ ಕುಳಿತು ದಿನಪತ್ರಿಕೆಯಲ್ಲಿ ಅವ ಮುಳುಗಿದ್ದ. ಅಷ್ಟು ಹೊತ್ತೂ ಕಿರುಚಿದ್ದಕ್ಕೆ ಸುಸ್ತಾಗಿ ತೆಪ್ಪಗೆ ಬಿದ್ದುಕೊಂಡಿದ್ದ ಫೋನು ಇದ್ದಕ್ಕಿದ್ದಂತೆ ಮತ್ತೆ ಆವೇಶಗೊಂಡು ಟ್ರಿನ್ ಟ್ರಿನ್ ಎಂದು ಜೋರಾಗಿ ಅರಚಿ ತನ್ನ ಅಸ್ತಿತ್ವವನ್ನು ಸಾರಿತು.

'ಅಣ್ಣಾ ಸ್ವಲ್ಪ ಫೋನು ನೋಡು' ಎಂದು ಮಾಡುತ್ತಿರುವ ಕೆಲಸ ಮುಂದುವರೆಸುತ್ತಾ ಕೂಗಿ ಹೇಳಿದೆ. ಅಣ್ಣನೋ ಫೋನ್ ಎತ್ತಿಕೊಂಡವ ಮಾತಾಡತೊಡಗಿದ. ಯಾರದ್ದಿರಬಹುದೆಂದು ಕುತೂಹಲದಿಂದ ಆಲಿಸಿದೆ.

'ಹಲೋ... ಹೌದ್ರೀ ಬರೋಬ್ಬರ್ ಅದ ಮೆಂಟಲ್ ಆಸ್ಪತ್ರೀನ ಇದು ಹೌದಾ? ಯಾವಾಗ್ಲಿಂದ?'

'...'

'ಹೌದ್ವಾದು! ನಿಮ್ ತ್ರಾಸು ಗೊತ್ತಾಗ್ತದ. ಚಿಂತೀ ಮಾಡ್ಬ್ಯಾಡ್ರೀ. ತಾಪಡ್ ತೋಪ್ ಕರ್ಕೊಂಬರ್ರೀ'

'...'

'ಒಳ್ಳೇದು, ಹಂಗ ಮಾಡ್ರೀ ಆತಿಲ್ಲೋ ಸರಿ'

ಫೋನು ಇಟ್ಟವ ಮತ್ತೆ ಪೇಪರ್ ಓದುವುದರಲ್ಲಿ ಮಗ್ನನಾದ. 'ಯಾರು ಫೋನ್ ಮಾಡಿದ್ದು? ಕರ್ಕೊಂಬರ್ರಿ ಅಂತಿದ್ಯಲ್ಲ ಯಾರವರು?'

'ನೀ ಯಾವಾಗ್ಲೂ ಹೇಳ್ತಿದ್ಯಲ್ಲೆ ಮೆಂಟಲಾಸ್ಪತ್ರೆ ಅಂತ ಮೇಲಿಂದ್ಮೇಲೆ ಫೋನು ಬರ್ತಿರುತ್ತೆ ಅಂತ ಆ ಮನುಷ್ಯ ತನ್ನ ಹೆಸರು ಶರಣಪ್ಪ ಅಂತ್ಹೇಳ್ದ. ಟೀನೇಜರ್ ಮಗ್ಳು ತಲೇ ಕೂದ್ಲನ್ನ ಹರ್ಕೊಂಡು ಚೀರಾಡ್ತಿದ್ದಾಳೆ ಕಂಟ್ರೋಲು ಮಾಡೋಕಾಗ್ತಿಲ್ಲ, ತಪಾಸಣೆಗೆ ಕರ್ಕೊಂಬರ್ತೀನಿ ಅಂದ, ಧಾರಾಳವಾಗಿ ಬಾ ಅಂದೆ ಅಷ್ಟೇ. ನಿಮ್ ಧಾರವಾಡ ಭಾಷೇದಾಗ ಮಾತಾಡಿದ್ದು ಬರೋಬ್ಬರಿತ್ತು ಹೌದಿಲ್ಲೋ!'

ಗಂಭೀರ ಮುಖಭಾವದಿಂದ ತಣ್ಣಗೆ ಉತ್ತರಿಸಿದವನಿಗೆ, 'ಯಾಕ್ಹಂಗ್ಹೇಳಿದ್ಯೋ ಅವ್ರೇನಾದ್ರೂ ಬಂದ್ರೇಗ್ತತಿ!' ಎಂದೆ.

ತಕ್ಷಣಕ್ಕೆ ಗಾಬರಿಯಿಂದ ಪ್ರಶ್ನಿಸಿದ್ದರೂ ಅವ ಉತ್ತರಿಸಿದ್ದು ಸರಿಯಾಗೇ ಇತ್ತು. ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತಾರಷ್ಟೇ ಎಂದು ಸಮಾಧಾನಿಸಿಕೊಂಡೆ. ಅಭ್ಯಾಸದಲ್ಲಿ ತೊಡಗಿದ್ದ ಮಗನೋ ಸಂಭಾಷಣೆ ಕೇಳಿಸಿಕೊಂಡವ ನಗುತ್ತಲೇ ಬಿಲದಿಂದ ಹೊರಬಂದಿದ್ದ. ಯಾವುದೇ ರಾಂಗ್ ನಂಬರ್ ಬಂದರೂ ಕರೆ ಮಾಡಿದವರ ಮಾತಿನ ಜಾಡಿಂದ ಮನಸ್ಥಿತಿ ಅರಿತು, ಸತ್ಯದ ತಲೆಯ ಮೇಲೆ ಹೊಡೆದ ಹಾಗೆ ಮಾತನಾಡುವುದು ವಸಂತಣ್ಣನಿಗೆ ಸಿದ್ಧಿಸಿದ ಕಲೆ, ಮತ್ತದು ಅವನ ಸ್ವಭಾವವೂ ಹೌದು. ಹಿರಿಯ ನಾಗರಿಕ ಪಟ್ಟವನ್ನಲಂಕರಿಸಿರುವ ನಾವೆಲ್ಲಾ ಇಂದಿಗೂ ತವರಿನಲ್ಲಿ ಒಟ್ಟಿಗೆ ಸೇರಿದಾಗ ಜಂಜಾಟಗಳನ್ನು ಮರೆತು ಇಂತಹ ಅನೇಕ ಘಟನೆಗಳನ್ನು ಮತ್ತೆ ಮತ್ತೆ ನೆನಪಿಸಿಕೊಂಡು ನಗೆಯಲೆಯಲ್ಲಿ ತೇಲುತ್ತಿರುತ್ತೇವೆ, ಪ್ರೌಢ ಮಕ್ಕಳೂ ಸಾಥ್ ನೀಡುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in

---

ಗುಂಡ: ಅಪ್ಪಾ ಒಂದು ಮದುವೆಗೆ ಎಷ್ಟು ಹಣ ಖರ್ಚಾಗಬಹುದು?
ಅಪ್ಪ: ಇಷ್ಟೇ ಅಂತ ಹೇಳೋದು ನನಗೂ ತಿಳಿಯದು ಮಗು! ಏಕೆಂದರೆ, ಅದಕ್ಕೆ ಇನ್ನೂ ಬೆಲೆ ತೆರುತ್ತಿದ್ದೇನೆ.

ಭಿಕ್ಷುಕ: ಒಂದು ರೂಪಾಯಿ ಕೊಡಿ ಸ್ವಾಮಿ, ತುಂಬಾ ಹಸಿವಾಗ್ತಾ ಇದೆ. ಊಟ ಮಾಡಬೇಕು...
ಜಿಪುಣ: ನಾನು ನಿನಗೆ 5 ರೂಪಾಯಿ ಕೊಡ್ತೀನಿ. ಆದರೆ ಮೊದಲು ಹೇಳು, ಒಂದು ರೂಪಾಯಿಗೆ ಊಟ ಎಲ್ಲಿ ಸಿಗುತ್ತೆ ಅಂತ?




ನ್ಯಾಯಾಧೀಶ: ಯಾವುದೇ ಸಾಕ್ಷಿ ಇಲ್ಲದ ಕಾರಣ ನಿನ್ನನ್ನು ಬಿಡುಗಡೆ ಮಾಡಲಾಗಿದೆ.
ಆರೋಪಿ: ಪ್ರಭು, ಹಾಗಿದ್ದರೆ ಕದ್ದ ಮಾಲನ್ನು ನಾನೇ ಇಟ್ಟುಕೊಳ್ಳಬಹುದೇ?

ಡಾಕ್ಟರ್: ದಿನಾ ದೇಹಕ್ಕೆ ಉತ್ತೇಜನ ನೀಡಲು ಸ್ವಲ್ಪ ಆಟ ಆಡಬೇಕು.
ಗುಂಡ: ದಿನಾ ಫುಟ್ಬಾಲ್, ಟೆನ್ನಿಸ್, ಕ್ರಿಕೆಟ್ ಆಡತೀನಿ ಸರ್.
ಡಾಕ್ಟರ್: ವಾವ್ ವೆರಿಗುಡ್, ಎಲ್ಲಿ ಆಡ್ತೀರಾ?
ಗುಂಡ: ಮೊಬೈಲ್‌ನಲ್ಲಿ ಸರ್..

ಸಂಗ್ರಹ: ಶರದ ಕುಲಕರ್ಣಿ, ಬೀದರ್